# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಮೇ2019**, ಬೆಂಗಳೂರು, ಸಂಪುಟ 5, ಸಂಚಿಕೆ 1, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 May 2019**, Bangaluru, Vol. 5, No.1, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


**ಧಮ್ಮ ಪದಗಳು**

ಅತ್ತಾ ಹವೇ ಜಿತಂ ಸೆಯ್ಯೋ ಯಾ ಚಾಯಂ ಇತರಾ ಪಜಾ,
ಅತ್ತದಂತಸ್ಸ ಪೋಸಸ್ಸ ನಿಚ್ಚಂ ಸನ್ಯಾತಚಾರಿನೊ(104).
ನೇವ ದೇವೋ, ನ ಗಂಧಬ್ಬೋ, ನ ಮಾರೋ ಸಹ ಬ್ರಹ್ಮನಾ,
ಜಿತಂ ಅಪಜಿತಂ ಕಯಿರಾ ತಥಾರೂಪಸ್ಸ ಜಂತುನೋ.(105)

ತನ್ನ ಮೇಲಿನ ವಿಜಯ, ಇತರರ ಮೇಲೆ ಜಯಗಳಿಸುವುದಕ್ಕಿಂತ ಬಹಳ ಉತ್ತಮ. ಯಾವ ದೇವತೆಯಾಗಲಿ, ಗಂಧರ್ವನಾಗಲೀ, ಮಾರನಾಗಲೀ, ಬ್ರಹ್ಮನಾಗಲೀ, ತನ್ನನ್ನು ತಾನು ದಮನಿಸಿಕೊಂಡಿರುವ, ಎಂದಿಗೂ ಸಂಯಮ ಶೀಲನಾದ ವ್ಯಕ್ತಿಯು ಗಳಿಸಿದ ಜಯವನ್ನು ಅಪಜಯವನ್ನಾಗಿ ತಿರುಗಿಸಲು ಸಾಧ್ಯವಿಲ್ಲ.

**ಧಮ್ಮಪದ – 104, 105. ಸಹಸ್ಸವಗ್ಗ**

## ಗಣರಾಜ್ಯವನ್ನು ಸಂರಕ್ಷಿಸುವುದು ಹೇಗೆ?

**ಪ್ರಧಾನ ವಿಪಶ್ಯನಾಚಾರ್ಯ ಶ್ರೀ ಎಸ್.ಎನ್.ಗೋಯಂಕ (1924–2013)**

('ಮೆಡಿಟೇಷನ್ ನೌವ್: ಇನ್ನರ್ ಪೀಸ್ ಥ್ರೂ ಇನ್ನರ್ ವಿಸ್ಡಂ' ಪುಸ್ತಕದಿಂದ ಅನುವಾದಿಸಲಾಗಿದೆ.)

ಅದು ಧರ್ಮ(ಧಮ್ಮ) ವಿತರಣೆಯ ಮೊದಲನೆಯ ವರ್ಷ. ಬೋಧಗಯಾದಲ್ಲಿ ಸಂಪೂರ್ಣ ಜ್ಞಾನೋದಯವನ್ನು ಪಡೆದು, ವಾರಣಾಸಿಯಲ್ಲಿ ಧರ್ಮ ಚಕ್ರವನ್ನು ಚಲನೆಯಲ್ಲಿಟ್ಟ ಮೇಲೆ, ಬೋಧ ಗಯಾದ ಮೂಲಕ ಬುದ್ಧ ರಾಜಗೃಹಕ್ಕೆ ಬಂದರು. ವಜ್ಜಿ ಗಣರಾಜ್ಯದ ಸೇನಾಧಿಪತಿಯಾದ ಲಿಚ್ಛವೀ ಮಹಾಲಿಯು ಬುದ್ಧರನ್ನು ಸಂಧಿಸಿದ. ಅವರ ಬೋಧನೆಯಿಂದ ಪ್ರಯೋಜನ ಪಡೆದು ಬುದ್ಧರ ಮೊದಲನೆಯ ಲಿಚ್ಛವೀ ಅನುಯಾಯಿ ಆದನು. ಮಹಾಲಿಯಿಂದ ಪ್ರೇರಣೆಗೊಂಡು ವೆಸಾಲೀಯ ಅನೇಕ ಲಿಚ್ಛವೀಗಳು ಕೆಲವೇ ದಿನಗಳಲ್ಲಿ ಬುದ್ಧರ ನಿಷ್ಠಾವಂತ ಶಿಷ್ಯರಾದರು.

ಯುದ್ಧ ಕಲೆಯಲ್ಲಿ ಮಹಾಲಿಯ ಕೌಶಲ್ಯವು, ವೆಸಾಲೀ ಸೈನ್ಯವನ್ನು ಆ ಪ್ರದೇಶದಲ್ಲಿ ಒಂದು ದೊಡ್ಡ ಶಕ್ತಿಯನ್ನಾಗಿ ಮಾಡಿತು. ಅವನ ಬಗ್ಗೆ ಲಿಚ್ಛವೀಗಳಿಗೆ ಅಗಾಧವಾದ ಗೌರವವಿತ್ತು. ದುರದೃಷ್ಟವಶಾತ್, ಅವನು ತನ್ನ ಎರಡೂ ಕಣ್ಣುಗಳನ್ನು ಕಳೆದುಕೊಂಡ. ಆದ್ದರಿಂದ ಅವನನ್ನು ಸೈನ್ಯದ ಮುಖ್ಯ ಸಲಹೆಗಾರನನ್ನಾಗಿ ನೇಮಕ ಮಾಡಿದರು ಮತ್ತು ಸೀಹ ಎಂಬ ಬುದ್ಧಿವಂತ ಲಿಚ್ಛವೀ ಯುವಕನನ್ನು ಸೇನಾ ದಂಡನಾಯಕನನ್ನಾಗಿ ಮಾಡಿದರು. ಆ ಸಮಯದಲ್ಲಿ ಸೀಹನು ಮತ್ತೊಬ್ಬ ಆಧ್ಯಾತ್ಮ ಗುರುವಿನ ಪ್ರಮುಖ ಶಿಷ್ಯನಾಗಿದ್ದ. ಆದರೆ ವೆಸಾಲೀಯ ಅನೇಕ ಲಿಚ್ಛವೀಗಳು ಬುದ್ಧರ ಅನುಯಾಯಿಗಳಾಗಿರುವುದನ್ನು ಕಂಡು, ಪ್ರಾರಂಭದ ಹಿಂಜರಿಕೆಯ ನಂತರ, ಕುತೂಹಲಕ್ಕಾಗಿ ಬುದ್ಧರನ್ನು ಭೇಟಿಮಾಡಲು ಬಂದ. ಅವರ ಜೊತೆ ಮಾತಾಡಿದ ಮೇಲೆ, ಆಳವಾದ ಪ್ರಭಾವಕ್ಕೊಳಗಾಗಿ ಬುದ್ಧರ ನಿಷ್ಠಾವಂತ ಅನುಯಾಯಿ ಆದನು. ಮಹಾಲಿಯ ತರಹ, ಸೀಹನು ಕೂಡ ಬುದ್ಧರ ಅನುಯಾಯಿ ಆದ ನಂತರವೂ, ಅದ್ಭುತ ಕೌಶಲ್ಯ ಮತ್ತು ಶ್ರದ್ಧೆಯಿಂದ ಸೈನ್ಯವನ್ನು ಮುನ್ನಡೆಸುವ ಜವಾಬ್ದಾರಿಯನ್ನು ನಿರ್ವಹಿಸಿದನು. ನಿಮ್ಮ ಕೌಟುಂಬಿಕ, ಸಾಮಾಜಿಕ ಮತ್ತು ವೃತ್ತಿಗೆ ಸಂಬಂಧಿಸಿದ ಜವಾಬ್ದಾರಿಗಳನ್ನು ಕಡೆಗಣಿಸಿ ಎಂದು ಬುದ್ಧರು ತಮ್ಮ ಲೌಕಿಕ ಅನುಯಾಯಿಗಳಿಗೆ ಬೋಧಿಸಲಿಲ್ಲ. ಅದರ ಬದಲು, ಈ ಕೆಲಸಗಳಲ್ಲಿ ಹೆಚ್ಚು ನೈಪುಣ್ಯತೆಯನ್ನು ಗಳಿಸಿರಿ ಎಂದು ಅವರಿಗೆ ಬುದ್ಧರು ಬೋಧಿಸುತ್ತಿದ್ದರು.

ಒಂದು ಸಾರಿ ಬುದ್ಧರು ವೆಸಾಲಿಗೆ ಬಂದು ಸಾರಂದದ ಸ್ತೂಪದ ಹತ್ತಿರ ಉಳಿದುಕೊಂಡರು. ಅವರನ್ನು ಸಂಧಿಸಲು ಅನೇಕ ಲಿಚ್ಛವೀಗಳು ಬಂದು, ಅವರಿಗೆ ವಂದಿಸಿ, ಒಂದು ಬದಿಯಲ್ಲಿ ಕುಳಿತರು. ವೆಸಾಲಿಯ ನೆರೆಯ ರಾಜ್ಯಗಳು ಅದರ ಅಭಿವೃದ್ಧಿಯ ಬಗ್ಗೆ ಅಸೂಯೆ ಹೊಂದಿದ್ದರಿಂದ, ಆಕ್ರಮಣದ ನಿರಂತರ ಭೀತಿಯಿತ್ತು. ಬುದ್ಧರಿಗೆ ಇದರ ಅರಿವಿತ್ತು. ಮಗಧ ಮತ್ತು ವೆಸಾಲಿಯ ಮಧ್ಯೆ ಇದ್ದ ಪರಸ್ಪರ ವೈರತ್ವದ ಬಗ್ಗೆಯೂ ಅವರಿಗೆ ತಿಳಿದಿತ್ತು. ಶಾಕ್ಯ ಗಣರಾಜ್ಯದಲ್ಲಿ ಹುಟ್ಟಿ, ಬೆಳೆದದ್ದರಿಂದ, ಗಣರಾಜ್ಯದ ಅಂತರ್ಗತ ಅನುಕೂಲಗಳು ಮತ್ತು ಅನಾನುಕೂಲಗಳ ಬಗ್ಗೆ ಅವರಿಗೆ ತಿಳಿದಿತ್ತು. ಆದ್ದರಿಂದ ವಜ್ಜಿ ಗಣರಾಜ್ಯದ ರಕ್ಷಣೆಗಾಗಿ, ಅವರನ್ನು ಆಕ್ರಮಣ ಮಾಡಲು ಸಾಧ್ಯವಾಗದಿರುವಂತಹ ಏಳು ಪ್ರಾಯೋಗಿಕ ಸೂಚನೆಗಳನ್ನು ಕೊಟ್ಟರು. ಅವು ಈ ಕೆಳಗಿನಂತಿವೆ.

1. **ಲಿಚ್ಛವೀಯರೇ! ಎಲ್ಲಿಯವರೆಗೆ ವಜ್ಜಿಯನರು ತಮ್ಮ ಒಗ್ಗಟ್ಟನ್ನು ಕಾಪಾಡಿಕೊಳ್ಳುವರೋ ಮತ್ತು ನಿಯಮಿತವಾಗಿ ಜೊತೆ ಸೇರುವರೋ ಅಲ್ಲಿಯವರೆಗೆ ಅವರು ಅಜೇಯರಾಗಿ ಉಳಿಯುತ್ತಾರೆ.**

ವಜ್ಜಿ ಗಣರಾಜ್ಯದ ರಾಜ್ಯ ಸಂಸತ್ತಿನ ಸದಸ್ಯರು(ಅವರನ್ನು ರಾಜರುಗಳು ಎಂದು ಕರೆಯಲಾಗುತ್ತಿತ್ತು) ಸಭಾ ಭವನದಲ್ಲಿ ನಿಯಮಿತವಾಗಿ ಸಭೆ ಸೇರುತ್ತಾರೆ, ದೇಶದ ಭದ್ರತೆಯ ಬಗ್ಗೆ ಚರ್ಚಿಸುತ್ತಾರೆ. ಸೋಮಾರಿತನದ ಕಾರಣದಿಂದ ಸಭೆ ಸೇರುವುದರಲ್ಲಿ ಅವರು ವಿಫಲರಾದರೆ, ಗಡಿಯಾಚೆಯ ಶತ್ರುಗಳು ಆಕ್ರಮಣ ಮಾಡುವ ಅವಕಾಶ ಪಡೆಯುತ್ತಾರೆ. ರಾಜರುಗಳು ಜಾಗೃತರಾಗಿಲ್ಲದಿರುವುದನ್ನು ನೋಡಿದಾಗ ಈ ಶತ್ರುಗಳು ದೇಶದ ಒಳನುಗ್ಗುತ್ತಾರೆ ಮತ್ತು ಜನರನ್ನು ದೋಚುತ್ತಾರೆ. ಆದರೆ ರಾಜರುಗಳು ಜಾಗೃತರಾಗಿದ್ದರೆ, ದೇಶದ ಒಳಗೆ ಆಗಂತುಕರ ಪ್ರವೇಶವನ್ನು ತಿಳಿಸಿದ ಕೂಡಲೇ, ಶತ್ರುಗಳನ್ನು ಧೂಳೀಪಟ ಮಾಡಲು ಅವರು ಸೈನ್ಯವನ್ನೂ ಕಳುಹಿಸುತ್ತಾರೆ. ಆಗ, ದೇಶವನ್ನು ಧ್ವಂಸ ಮಾಡಲು ನಮ್ಮನ್ನು ಬಿಡುವುದಿಲ್ಲ ಎಂಬುದನ್ನು ಆಕ್ರಮಣಕಾರರು ಅರ್ಥಮಾಡಿಕೊಳ್ಳುತ್ತಾರೆ. ತತ್ಫಲವಾಗಿ ಅವರು ದಿಕ್ಕಾಪಾಲಾಗಿ ಓಡುತ್ತಾರೆ.

2. **ಲಿಚ್ಛವೀಯರೇ! ಎಲ್ಲಿಯವರೆಗೆ ವಜ್ಜಿಯನರು ಒಗ್ಗಟ್ಟಿನಿಂದ ಜೊತೆಗೂಡುವರೋ, ಒಗ್ಗಟ್ಟಿನಿಂದ ಪ್ರತಿಭಟಿಸುವರೋ, ಒಗ್ಗಟ್ಟಿನಿಂದ ತಮ್ಮ ಕರ್ತವ್ಯಗಳನ್ನು ಮಾಡುವರೋ, ಅಲ್ಲಿಯವರೆಗೆ ಅವರು ಅಜೇಯರಾಗಿ ಉಳಿಯುತ್ತಾರೆ.**

ಅಪಾಯದ ಕಾಲದಲ್ಲಿ ಎಚ್ಚರಿಕೆಯ ಕಹಳೆ ಮೊಳಗಿದಾಗ, ಪ್ರತಿಯೊಬ್ಬ ರಾಜನು ತಕ್ಷಣ ಸಭಾ ಭವನಕ್ಕೆ ಬರುತ್ತಾನೆ. ಯಾವುದೇ ರಾಜ ಊಟ ಮಾಡುತ್ತಿದ್ದರೆ, ಅದನ್ನು ಅರ್ಧಕ್ಕೇ ಬಿಟ್ಟು ಬರುತ್ತಾನೆ; ಅವನು ಉಡುಪು ಮತ್ತು ಆಭರಣಗಳನ್ನು ಧರಿಸುತ್ತಿದ್ದರೆ, ಅದನ್ನು ನಿಲ್ಲಿಸಿ ಉಟ್ಟ ಬಟ್ಟೆಯಲ್ಲೇ ತಕ್ಷಣ ಸಭಾಂಗಣಕ್ಕೆ ಬರುತ್ತಾನೆ. ಅಲ್ಲಿ ಎಲ್ಲರೂ ಒಟ್ಟಿಗೆ ಕುಳಿತು, ವಿಚಾರ ವಿನಿಮಯ ಮತ್ತು ಚರ್ಚೆಯ ನಂತರ, ಒಮ್ಮತದ ತೀರ್ಮಾನ ತೆಗೆದುಕೊಳ್ಳುತ್ತಾರೆ. ಹೀಗೆ ಪ್ರತಿಯೊಬ್ಬರೂ ಒಗ್ಗಟ್ಟಿನಿಂದ ಇರುತ್ತಾರೆ. ತದನಂತರ ಏನು ಕೆಲಸ ಮಾಡಬೇಕೋ ಅದನ್ನು ಒಗ್ಗಟ್ಟಿನಿಂದ ಮಾಡುತ್ತಾರೆ.

ಪ್ರತಿಯೊಬ್ಬರೂ ದೇಶ ರಕ್ಷಿಸಲು ಉತ್ಸುಕರಾಗಿರಬೇಕು ಎಂದು ಬುದ್ಧ ಸೂಚಿಸಿದರು. ಯಾವುದೇ ಪಟ್ಟಣ ಅಥವಾ ಹಳ್ಳಿಯನ್ನು ಶತ್ರುವು ಆಕ್ರಮಣ ಮಾಡಿದ್ದಾನೆ ಎಂಬ ಸುದ್ದಿಯು ದೇಶದ ಯಾವುದೇ ಭಾಗದಿಂದ

ಯಾವಾಗ ಪ್ರಕಟವಾಗುತ್ತದೆಯೋ ಆಗ, "ಯಾರು ಅಲ್ಲಿಗೆ ಹೋಗಿ ಶತ್ರುವನ್ನು ಸದೆ ಬಡಿಯುತ್ತೀರಿ?" ಎಂದು ಜನರನ್ನು ಕೇಳಿದಾಗ, "ನಾನು ಮೊದಲು, ನಾನು ಮೊದಲು" ಎಂಬ ಕೆಚ್ಚೆದೆಯ ಕೂಗುಗಳು ದೇಶದ ತುಂಬಾ ಪ್ರತಿಧ್ವನಿಸಬೇಕು. ಅಪಾಯದ ಸಮಯದಲ್ಲಿ ದೇಶವನ್ನು ರಕ್ಷಿಸುವುದು ತಮ್ಮ ಮೂಲಭೂತ ಕರ್ತವ್ಯ ಎಂದು ಎಲ್ಲಾ ಪ್ರಜೆಗಳು ಪರಿಗಣಿಸಬೇಕು. ಎಂದೆಂದಿಗೂ ಅವರು ಈ ಕರ್ತವ್ಯದಿಂದ ವಿಮುಖರಾಗಬಾರದು.

**3. ಲಿಚ್ಛವೀಗಳೇ! ಎಲ್ಲಿಯವರೆಗೆ ವಜ್ಜಿಯನರು ತಮ್ಮ ಆಡಳಿತದ ಮತ್ತು ನ್ಯಾಯ ವ್ಯವಸ್ಥೆಯ ಪುರಾತನ ತತ್ವಗಳನ್ನು ಉಲ್ಲಂಘಿಸುವುದಿಲ್ಲವೋ ಅಲ್ಲಿಯವರೆಗೆ ಅವರು ಅಜೇಯರಾಗಿ ಉಳಿಯುತ್ತಾರೆ.**

ಯಾವುದೇ ರಾಜನು ತನ್ನ ಪ್ರದೇಶದಲ್ಲಿ ಮನಬಂದಂತೆ ತೆರಿಗೆಯನ್ನು ಹೆಚ್ಚಿಸಿದರೆ ಅಥವಾ ಹೊಸ ತೆರಿಗೆಯನ್ನು ಹೇರಿದರೆ, ಅದು ಸಂವಿಧಾನದ ಉಲ್ಲಂಘನೆಯಾಗುತ್ತದೆ ಮತ್ತು ಅಸಮಾಧಾನಕ್ಕೆ ಕಾರಣವಾಗುತ್ತದೆ. ಅತೃಪ್ತ ಜನರು ಕಷ್ಟದ ಸಮಯದಲ್ಲಿ ಸಹಾಯ ಮಾಡುವುದಿಲ್ಲ. ಅಥವಾ ಯಾವುದೇ ರಾಜನು ಪಕ್ಷಪಾತದಿಂದ, ತನ್ನ ಪ್ರದೇಶದಲ್ಲಿ ತೆರಿಗೆ ಸಂಗ್ರಹಿಸದಿದ್ದರೆ, ರಾಜ್ಯದ ಬೊಕ್ಕಸವು ಖಾಲಿಯಾಗುತ್ತದೆ. ಅವಶ್ಯಕವಾದ ಶಸ್ತ್ರಾಸ್ತ್ರಗಳನ್ನು ಪಡೆದುಕೊಳ್ಳಲು ಸೈನ್ಯಕ್ಕೆ ಸಾಧ್ಯವಾಗುವುದಿಲ್ಲ. ಸಮಯಕ್ಕೆ ಸರಿಯಾಗಿ ಸೈನಿಕರಿಗೆ ವೇತನ ಕೊಡದಿದ್ದರೆ, ಸೈನ್ಯದ ಶಕ್ತಿ ಕುಂದುತ್ತದೆ.

ನ್ಯಾಯಾಂಗದ ಪುರಾತನ ದಂಡಸಂಹಿತೆಯ ಯಾವುದೇ ಉಲ್ಲಂಘನೆಯು, ಯಾವಾಗಲೂ ಆಗಬಾರದು. ಅಪರಾಧ ಎಸಗಿದ್ದಾನೆ ಎಂಬ ಅನುಮಾನದಿಂದ ಯಾವುದೇ ವ್ಯಕ್ತಿಯನ್ನು ಬಂಧಿಸಿದ್ದರೆ, ಮನವಿ ದಂಡಸಂಹಿತೆಯ ಪ್ರಕಾರ, ಅವನು ಏಳು ಹಂತದವರೆಗೆ ಅಪೀಲು ಮಾಡಿಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆ. ವಿಚಾರಣಾ ಮಂತ್ರಿ, ನ್ಯಾಯಿಕ ದಂಡಾಧಿಕಾರಿ (ಜುಡಿಸಿಯಲ್ ಮ್ಯಾಜಿಸ್ಟ್ರೇಟ್), ಮುಖ್ಯ ನ್ಯಾಯಾಧಿಪತಿ, ತೀರ್ಪುಗಾರರ ಮಂಡಲಿ, ಸೇನಾಧಿಪತಿ, ಪಟ್ಟದ ರಾಜಕುಮಾರ ಮತ್ತು ರಾಜ ಇವರುಗಳಿಗೆ ಅಪರಾಧಿಯು ಅನುಕ್ರಮವಾಗಿ ಅಪೀಲು ಮಾಡಿಕೊಳ್ಳಬಹುದು. ಈ ಯಾವುದೇ ಅಪೀಲಿನಲ್ಲಿ ನಿರಪರಾಧಿ ಎಂದು ಸಾಬೀತಾದರೆ, ಅವನನ್ನು ಬಿಡುಗಡೆ ಮಾಡಲಾಗುವುದು. ಅವನು ಅಪರಾಧಿ ಎಂದು ಅಂತಿಮವಾಗಿ ಸಾಬೀತಾದರೆ, ಅವನನ್ನು ಶಿಕ್ಷಿಸಲಾಗುತ್ತದೆ. ಈ ರೀತಿಯಾಗಿ ಅವನನ್ನು ಶಿಕ್ಷಿಸಿದಾಗ, ಕಾನೂನು ಉಲ್ಲಂಘಿಸಿದವನಿಗೆ ಮತ್ತು ಅವನ ಕುಟುಂಬದವರಿಗೆ, ಜೊತೆಗೆ ಸಮುದಾಯದ ಜನರಿಗೆ ಯಾವುದೇ ಅಸಮಾಧಾನ ಇರುವುದಿಲ್ಲ. ಆದರೆ ನ್ಯಾಯಯುತ ವಿಚಾರಣೆ ಮಾಡದೆ ಮತ್ತು ಮೇಲು ಮನವಿ ಮಾಡಿಕೊಳ್ಳಲು ಅವಕಾಶ ನೀಡದೆ ಶಿಕ್ಷೆ ವಿಧಿಸಿದರೆ, ನ್ಯಾಯಾಂಗ ವ್ಯವಸ್ಥೆಯ ಉಲ್ಲಂಘನೆಯಾಗುತ್ತದೆ, ಮತ್ತು ಜನರು ಅಸಮಾಧಾನಗೊಳ್ಳುತ್ತಾರೆ. ಅಪಾಯದ ಕಾಲದಲ್ಲಿ, ಶತ್ರುಗಳನ್ನು ಹಿಮ್ಮೆಟ್ಟಿಸಲು ಅವರು ಸಂಪೂರ್ಣ ಸಹಕಾರ ನೀಡುವುದಿಲ್ಲ. ನ್ಯಾಯಾಂಗ ವ್ಯವಸ್ಥೆಯನ್ನು ಕಿಂಚಿತ್ತೂ ಉಲ್ಲಂಘಿಸದೆ ಆಡಳಿತವನ್ನು ನಡೆಸಿದರೆ, ಜನರು ತೃಪ್ತರಾಗುತ್ತಾರೆ ಮತ್ತು ದೇಶದ ರಕ್ಷಣೆಗೆ ಸಂತೋಷದಿಂದ ಸಹಾಯ ಮಾಡುತ್ತಾರೆ.

**4. ಲಿಚ್ಛವೀಯರೇ! ಎಲ್ಲಿಯವರೆಗೆ ವಜ್ಜಿಯನರು ತಮ್ಮ ಹಿರಿಯರನ್ನು ಪೂಜ್ಯಭಾವನೆಯಿಂದ ಕಾಣುವರೋ, ಗೌರವಿಸುವರೋ, ಪೂಜಿಸುವರೋ, ಸತ್ಕರಿಸುವರೋ ಮತ್ತು ಅವರ ಮಾತುಗಳಿಗೆ ಮನ್ನಣೆ ನೀಡುವರೋ, ಅಲ್ಲಿಯವರೆಗೆ ಅವರು ಅಜೇಯರಾಗಿ ಉಳಿಯುತ್ತಾರೆ.**

ದೇಶದ ಅನುಭವಸ್ಥ, ಹಿರಿಯ, ನಿವೃತ್ತ ರಾಜರುಗಳಿಗೆ ಗೌರವವನ್ನು ಮುಂದುವರಿಸಿದರೆ, ಅವರನ್ನು ಕಡೆಗಣಿಸದಿದ್ದರೆ, ಆಗ ಅವರ ಆಡಳಿತದ ಮತ್ತು ದೇಶದ ಭದ್ರತೆಯ ದೀರ್ಘಾವಧಿಯ ಅನುಭವದ ಪ್ರಯೋಜನವು ಲಭಿಸುವುದು ಮುಂದುವರಿಯುತ್ತದೆ. ದೇಶಕ್ಕೆ ಅಪಾಯದ ಸಮಯದಲ್ಲಿ ಅವರು ಒಗ್ಗಟ್ಟಾದ ಮತ್ತು ದೇಶವನ್ನು ರಕ್ಷಿಸಿದ ರೀತಿ, ಯುದ್ಧಭೂಮಿಯಲ್ಲಿ ಸೈನ್ಯವನ್ನು ನಿಯೋಜನೆ ಮಾಡಿದ್ದು ಮತ್ತು ಶತ್ರು ಸೈನ್ಯದ ವ್ಯೂಹಗಳನ್ನು ಭೇದಿಸಿದ ರೀತಿಯ ಬಗೆಗಿನ ಅವರ ಅನುಭವಗಳು ಗಣರಾಜ್ಯದ ಭದ್ರತೆಯನ್ನು ಬಲಪಡಿಸುತ್ತವೆ. ಅವರ ಸಲಹೆಯನ್ನು ಕಡೆಗಣಿಸಿದರೆ, ಅವರ ಅಪಾರ ಅನುಭವದ ಲಾಭದಿಂದ ದೇಶವು ವಂಚಿತವಾಗುತ್ತದೆ.

**5. ಲಿಚ್ಛವೀಯರೇ! ಎಲ್ಲಿಯವರೆಗೆ ವಜ್ಜಿಯನರು ತಮ್ಮ ಹೆಣ್ಣುಮಕ್ಕಳನ್ನು ರಕ್ಷಿಸುತ್ತಾರೋ ಮತ್ತು ಅವರನ್ನು ಅಪಹರಿಸುವುದಿಲ್ಲವೋ, ಅಲ್ಲಿಯವರೆಗೆ ಅವರು ಅಜೇಯರಾಗಿ ಉಳಿಯುತ್ತಾರೆ.**

ಅಧಿಕಾರದ ನಶೆಯು ಅತ್ಯಂತ ಶಕ್ತಿಯುತವಾದುದು. ಅಧಿಕಾರದ ಅಮಲಿಗೆ ಒಳಗಾಗಿರುವ ಯಾವುದೇ ರಾಜ ಬೇರೆಯವರ ಹೆಂಗಸರಿಗೆ ಕಿರುಕುಳ ಕೊಟ್ಟರೆ, ಅವರ ಕುಟುಂಬಗಳು ಅಸಮಾಧಾನಗೊಳ್ಳುತ್ತವೆ ಮತ್ತು ದೇಶದ ಶತ್ರುಗಳಾಗಿ ಪರಿವರ್ತಿತರಾಗುತ್ತಾರೆ. ದೇಶದ ಮೇಲೆ ಶತ್ರುಗಳು ದಾಳಿ ಮಾಡಿದಾಗ, ಅವರು ಶತ್ರುಗಳ ಜೊತೆ ಸೇರಿ, ದೇಶ ನಾಶದಲ್ಲಿ ಸಹಾಯಮಾಡಿ ಅವರಿಗಾದ ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳುತ್ತಾರೆ. ರಾಜರುಗಳು ಅನೈತಿಕತೆಯಿಂದ ದೂರ ಉಳಿದರೆ, ದೇಶದ ಭದ್ರತೆಯು ಅಪಾಯಕ್ಕೆ ಸಿಲುಕುವುದಿಲ್ಲ.

**6. ಲಿಚ್ಛವೀಯರೇ! ಎಲ್ಲಿಯವರೆಗೆ ವಜ್ಜಿಯನರು ತಮ್ಮ ಗಣರಾಜ್ಯದ ಒಳಗೆ ಮತ್ತು ಹೊರಗೆ ಪೂಜನೀಯ ವಸ್ತುಗಳನ್ನು ಪವಿತ್ರವೆಂದು ಭಾವಿಸುವರೋ ಮತ್ತು ಅವುಗಳಿಗೆ ಹಣಕಾಸಿನ ನೆರವನ್ನು ನೀಡುವರೋ ಅಲ್ಲಿಯವರೆಗೆ ಅವರು ಅಜೇಯರಾಗಿ ಉಳಿಯುತ್ತಾರೆ.**

ಆಗಿನ ಕಾಲದಲ್ಲಿ ಸಹ ತಮ್ಮದೇ ಆದ ದೇವಸ್ಥಾನಗಳನ್ನು ಮತ್ತು ಪೂಜಾ ಸ್ಥಾನಗಳನ್ನು ಹೊಂದಿದ್ದ ಅನೇಕ ಪಂಥಗಳಿದ್ದವು. ಒಂದು ಬುದ್ಧಿವಂತ ದೇಶವು ಎಲ್ಲಾ ಜನರನ್ನು ಸಂತೋಷ ಮತ್ತು ತೃಪ್ತಿಯಿಂದ ಇಟ್ಟಿರಬೇಕು. ಅವರನ್ನು ಹಿಂಸಿಸಿ ಅವರು ಬಲವಂತವಾಗಿ ದೇಶದ ಶತ್ರುಗಳಾಗುವಂತೆ ಮಾಡಬಾರದು. ಅವರ ಪೂಜಾ ಸ್ಥಳಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು. ಸರ್ಕಾರದಿಂದ ಅವರು ಪಡೆಯುತ್ತಿದ್ದ ಹಣಕಾಸಿನ ನೆರವನ್ನು ಯಾವಾಗಲೂ ನಿಲ್ಲಿಸಬಾರದು. ಒಂದು ವೇಳೆ ನಿಲ್ಲಿಸಿದರೆ, ಆ ಪೂಜಾ ಸ್ಥಳಗಳ ದೇವರುಗಳು ಅಸಂತುಷ್ಟಗೊಳ್ಳುತ್ತವೆ, ಅದಕ್ಕಿಂತಲೂ ಅಪಾಯಕಾರಿಯಾದದ್ದು ಎಂದರೆ ಆ ದೇವರುಗಳ ಭಕ್ತರು ದೇಶದ ಮತ್ತು ರಾಜರ ಶತ್ರುಗಳಾಗುತ್ತಾರೆ. ದೇಶದ ಮೇಲೆ ಆಕ್ರಮಣ ಮಾಡುವ ಶತ್ರುಗಳ ಜೊತೆ ಸೇರುತ್ತಾರೆ. ಆದುದರಿಂದ, ದೇಶದ ರಕ್ಷಣೆಯ ದೃಷ್ಟಿಯಿಂದ ಈ ಪೂಜಾ ಸ್ಥಳಗಳಿಗೆ ಸರಿಯಾದ ರಕ್ಷಣೆ ಒದಗಿಸುವುದು ಅತ್ಯಾವಶ್ಯಕ.

**7. ಲಿಚ್ಛವೀಯರೇ? ಸಂತರು ಮತ್ತು ಅರಹಂತರಿಗೆ ಎಲ್ಲಿಯವರೆಗೆ ವಜ್ಜಿಯನರು ಬೆಂಬಲ ಮತ್ತು ರಕ್ಷಣೆ ನೀಡುವರೋ ಅಲ್ಲಿಯವರೆಗೆ ಅವರು ಅಜೇಯರಾಗಿ ಉಳಿಯುತ್ತಾರೆ.**

ಯಾವ ದೇಶದಲ್ಲಿ ಸಂತರು ಮತ್ತು ಅರಹಂತರನ್ನು ಶಾಂತಿಯಿಂದ ಬದುಕಲು ಬಿಡುವುದಿಲ್ಲವೋ, ಅಗೌರವಿಸುವರೋ ಮತ್ತು ದೈಹಿಕವಾಗಿಯೂ ಹಲ್ಲೆ ಮಾಡುವರೋ ಅಂತಹ ದೇಶವನ್ನು ಅವರು ಬಿಟ್ಟು ಹೋಗುತ್ತಾರೆ. ಜೊತೆಗೆ, ಸಂತರು ಮತ್ತು ಅರಹಂತರು ಹೊರಗಿನಿಂದ ಅಂತಹ ದೇಶಕ್ಕೆ ಬರುವುದಿಲ್ಲ. ಅದರ ಫಲವಾಗಿ, ನಿಜವಾದ ಧರ್ಮದ ಬಗೆಗಿನ ಪ್ರವಚನಗಳಿಂದ ಜನರು ವಂಚಿತರಾಗಿ ನೀತಿಗೆಟ್ಟವರಾಗುತ್ತಾರೆ. ಭ್ರಷ್ಟಾಚಾರ ಹೆಚ್ಚಾಗುತ್ತದೆ ಮತ್ತು ಶಾಂತಿ, ಸಂಪತ್ತು ಮತ್ತು ಸಾಮರಸ್ಯ ನಾಶವಾಗುತ್ತವೆ. ಶೀಲವಂತ ಜನರ ಕೊರತೆಯು ದೇಶವನ್ನು ದುರ್ಬಲಗೊಳಿಸುತ್ತದೆ. ಆದುದರಿಂದ, ಸಂತರು ಮತ್ತು ಅರಹಂತರ ರಕ್ಷಣೆಯು ದೇಶದ ಭದ್ರತೆಗೆ ಯಾವಾಗಲೂ ಅತ್ಯಾವಶ್ಯಕವಾಗಿದೆ.

ಈ ಏಳು ಸೂಚನೆಗಳನ್ನು ವಜ್ಜಿಯನರು ಅನುಸರಿಸುವ ತನಕ ಅವರು ಅಜೇಯರಾಗಿ ಉಳಿಯುತ್ತಾರೆ ಮತ್ತು ವಜ್ಜಿ ಗಣರಾಜ್ಯವು ಏಳಿಗೆಯಾಗುತ್ತದೆ ಎಂದು ಬುದ್ಧ ಹೇಳಿದರು. ಈ ಸೂಚನೆಗಳನ್ನು ಅನುಸರಿಸುತ್ತಾ, ಬಹಳ ಕಾಲದವರೆಗೆ ವಜ್ಜಿಯನರು ನಿಜವಾಗಿಯೂ ಅಜೇಯರಾಗಿ ಉಳಿದರು.

* * * * *

ಕೆಲವು ವರ್ಷಗಳ ನಂತರದ ಒಂದು ಚಾರಿತ್ರಿಕ ದುರಂತದ ದೃಶ್ಯವು ನಮ್ಮ ಮುಂದೆ ಬರುತ್ತದೆ. ಬುದ್ಧರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು; ನಲವತ್ತೈದು ವರ್ಷಗಳ ಧರ್ಮ ಬೋಧನೆಯ ಅವಧಿಯು ಇನ್ನೇನು ಪೂರ್ಣಗೊಳ್ಳುವುದರಲ್ಲಿತ್ತು. ರಾಜಗೃಹವನ್ನು ಬಿಟ್ಟು, ಕಾಲುನಡಿಗೆಯಲ್ಲಿ ತಮ್ಮ ಕೊನೆಯ ಪ್ರಯಾಣವನ್ನು ಆರಂಭಿಸಿದರು. ಮಗಧ ದೇಶವು ತನ್ನ ಶತ್ರುಗಳಾದ ಲಿಚ್ಛವೀಗಳ ಮೇಲೆ ಸದ್ಯದಲ್ಲಿಯೇ ಆಕ್ರಮಣ ಮಾಡಲಿದೆ ಎಂಬ ಸುದ್ದಿಯನ್ನು ಮಗಧದ ರಾಜ, ಅಜಾತಶತ್ರುವು ತನ್ನ ಮಂತ್ರಿಯಾದ ವಸ್ಸಕಾರನ ಮೂಲಕ ಬುದ್ಧರಿಗೆ ತಲುಪಿಸಿದ. ವಸ್ಸಕಾರನಿಗೆ ಏನನ್ನೂ ಹೇಳದೆ, ಪಕ್ಕದಲ್ಲಿದ್ದ ಆನಂದನನ್ನು ಕುರಿತು ಬುದ್ಧರು, "ಆನಂದ! ಅನೇಕ ವರ್ಷಗಳ ಹಿಂದೆ ನಾನು ವಜ್ಜಿಯನರಿಗೆ ನೀಡಿದ್ದ ಏಳು ಸೂಚನೆಗಳನ್ನು ಅವರು ಪರಿಪೂರ್ಣವಾಗಿ ಅನುಸರಿಸುತ್ತಿದ್ದಾರೆಯೇ?" ಎಂದು ಕೇಳಿದರು.

"ಹೌದು ಭಗವಾನ್ (ಭಂತೇ), ಅವುಗಳನ್ನು ಅವರು ಪರಿಪೂರ್ಣವಾಗಿ ಅನುಸರಿಸುತ್ತಿದ್ದಾರೆ" ಎಂದು ಆನಂದ ಹೇಳಿದರು.

ಆಗ ಬುದ್ಧ ಹೇಳಿದರು, "ಎಲ್ಲಿಯವರೆಗೆ ವಜ್ಜಿಯನರು ಈ ಏಳು ಸೂಚನೆಗಳನ್ನು ಅನುಸರಿಸುತ್ತಾರೋ ಅಲ್ಲಿಯವರೆಗೆ ಅವರನ್ನು ಸೋಲಿಸಲು

ಸಾಧ್ಯವಿಲ್ಲ."

ವಸ್ಸಕಾರನು ಕಪಟ ಮತ್ತು ವಂಚನೆಯಲ್ಲಿ ನಿಪುಣನಾಗಿದ್ದ. ವಜ್ಜಿಯನರು ಒಗ್ಗಟ್ಟಿನಿಂದಿರುವ ತನಕ ನಿಜವಾಗಿಯೂ ಅವರು ಅಜೇಯರಾಗಿ ಉಳಿಯುತ್ತಾರೆ ಎಂಬುದನ್ನು ಅವನು ತಕ್ಷಣವೇ ಅರ್ಥಮಾಡಿಕೊಂಡ. ವಜ್ಜಿಯನರ ಮೇಲಿನ ಆಕ್ರಮಣವನ್ನು ಮುಂದೂಡಿದ. ನಂತರ ನಡೆದ ಘಟನೆಗಳು, ವಸ್ಸಕಾರನ ಕಪಟ ಮತ್ತು ವಜ್ಜಿಯನರ ಮೂರ್ಖತನದ ನೋವಿನ ಚರಿತ್ರೆಯಾಗಿದೆ. ಆ ಕಾರಣದಿಂದ ವಜ್ಜಿಯನರ ಬಲವಾದ ಒಗ್ಗಟ್ಟು ಸಂಪೂರ್ಣವಾಗಿ ನಾಶವಾಯಿತು. ಅವರಲ್ಲಿನ ಒಡಕು ಎಷ್ಟೊಂದು ಆಳವಾಯಿತೆಂದರೆ, ಮಗಧರ ಆಕ್ರಮಣವನ್ನು ಹಿಮ್ಮೆಟ್ಟಿಸುವುದಿರಲಿ, ಅವರ ಸೈನ್ಯವನ್ನು ಎದುರಿಸಲು ಒಗ್ಗಟ್ಟಾಗಲೂ ವಜ್ಜಿಯನರು ಶಕ್ತರಾಗಲಿಲ್ಲ. ಲಿಚ್ಛವೀ ಗಣರಾಜ್ಯವು ಶಾಶ್ವತವಾಗಿ ನಾಶವಾಯಿತು. ಅವರು ಬುದ್ಧರ ಪ್ರಯೋಜನಕಾರಿ ಬೋಧನೆಗಳನ್ನು ಮರೆತರು ಮತ್ತು ತಮ್ಮ ವಿನಾಶದ ಬೀಜಗಳನ್ನು ತಾವೇ ಬಿತ್ತಿದರು.

ಗಣರಾಜ್ಯದ ರಕ್ಷಣೆಗೆ ಬುದ್ಧರು ನೀಡಿದ ಸಾರ್ವತ್ರಿಕ ಬೋಧನೆಯು, ಆಗ ಎಷ್ಟು ಪ್ರಸ್ತುತವಾಗಿತ್ತೋ ಈಗಲೂ ಅಷ್ಟೇ ಪ್ರಸ್ತುತವಾಗಿದೆ. ಆಂತರಿಕ ವೈಷಮ್ಯವು ಉಂಟುಮಾಡಿದ ವಿನಾಶದ ಅಪಾಯವು ಇಂದಿಗೂ ಅಷ್ಟೇ ಪ್ರಸ್ತುತವಾಗಿದೆ. ಬುದ್ಧರ ಬೋಧನೆಯನ್ನು ಮರೆತ ವಜ್ಜಿಯನರಿಂದ ಇಂದಿನ ಭಾರತವು ಪಾಠ ಕಲಿಯಲಿ.

ದೀರ್ಘಕಾಲದವರೆಗೆ ಗಣರಾಜ್ಯದ ಶಕ್ತಿಯನ್ನು ಕಾಪಾಡಲು, ವೈಷಮ್ಯದ ಬೀಜಗಳನ್ನು ದೇಶದಿಂದ ತೆಗೆದು ಹಾಕಬೇಕು. ದೇಶವನ್ನು ವಿಭಜಿಸುವ ವಿವಾದಗಳನ್ನು ಬಿಟ್ಟುಬಿಡಬೇಕು ಮತ್ತು ಒಗ್ಗಟ್ಟಿನ ಅಂಶಗಳನ್ನು ಬಲಪಡಿಸಬೇಕು. ಪ್ರತ್ಯೇಕತಾವಾದ ಅಥವಾ ಜಾತಿವಾದದ ಕಾರಣದಿಂದ ದೇಶವನ್ನು ವಿಭಜಿಸಬಾರದು.

ಯಾವುದೇ ಪಂಥವನ್ನು ಧರ್ಮ ಎಂದು ಪರಿಗಣಿಸದಿರುವ ತನಕ, ವಿವಿಧ ಪಂಥಗಳ ಜನರು ಯಾವುದೇ ದೇಶದಲ್ಲಿ ಸಾಮರಸ್ಯದಿಂದ ಒಟ್ಟಿಗೆ ಬದುಕಬಹುದು. ಎರಡರ ಮಧ್ಯದ ವ್ಯತ್ಯಾಸವು ಸ್ಪಷ್ಟವಾಗಿದೆ. ವಿವಿಧ ಪಂಥಗಳು ವಿವಿಧ ರೀತಿಯ ಪೂಜಾ ಸ್ಥಳಗಳನ್ನು, ವಿವಿಧ ಬಗೆಯ ತಾತ್ವಿಕ ನಂಬಿಕೆಗಳನ್ನು, ವಿವಿಧ ಧಾರ್ಮಿಕ ವಿಧಿ ಮತ್ತು ನಿತ್ಯಾಚರಣೆಗಳನ್ನು ಹೊಂದಿವೆ. ಜೊತೆಗೆ ವೈವಿಧ್ಯಮಯ ಉಡುಪುಗಳು, ಹಬ್ಬಗಳು, ಸಂಪ್ರದಾಯಗಳು, ಆಹಾರ ಪದ್ಧತಿಗಳು ಮತ್ತು ಉಪವಾಸ ನಿಯಮಗಳನ್ನು ಹೊಂದಿವೆ. ಪ್ರತಿಯೊಂದು ಪಂಥವೂ ತನ್ನ ಪಂಥೀಯ ಆಚರಣೆಗಳನ್ನು ಇತರ ಪಂಥೀಯರ ಭಾವನೆಗಳಿಗೆ ಧಕ್ಕೆಯಾಗದ ರೀತಿಯಲ್ಲಿ ಮುಕ್ತವಾಗಿ ಆಚರಿಸಬಹುದು. ತನ್ನ ಪಂಥದ ಯಾವುದೇ ಅಂಶವನ್ನು ವ್ಯಕ್ತಿಯು ಧರ್ಮ ಎಂದು ಪರಿಗಣಿಸಬಾರದು ಮತ್ತು ಅಂಧ ಭಕ್ತಿಯ ಭಾವೋದ್ವೇಗವನ್ನು ಉತ್ಪತ್ತಿ ಮಾಡಬಾರದು. ಪಂಥಗಳು ಭಿನ್ನ ಭಿನ್ನವಾಗಿರಬಹುದು ಮತ್ತು ವಿವಿಧ ಅಂಶಗಳನ್ನು ಒಳಗೊಂಡಿರಬಹುದು; ಆದರೆ ಧರ್ಮವು ಯಾವಾಗಲೂ ಅವಿಭಾಜ್ಯವಾಗಿರುತ್ತದೆ. ಸಾರ್ವತ್ರಿಕ ಅವಿಭಾಜ್ಯ ಧರ್ಮದ ನಿಜವಾದ ಗುಣದ ಜ್ಞಾನವು ಜನರಲ್ಲಿ ಹರಡಲಿ. ನೈತಿಕ ಜೀವನ ನಡೆಸುವುದೇ ಧರ್ಮ. ಇತರರಿಗೆ ಹಾನಿ ಮಾಡುವ ಮತ್ತು ಅವರ ಶಾಂತಿ ಮತ್ತು ಸಂತೋಷಕ್ಕೆ ಭಂಗ ತರುವಂತಹ ಯಾವುದೇ ವಾಚಿಕ ಅಥವಾ ದೈಹಿಕ ಕ್ರಿಯೆಯನ್ನು ವ್ಯಕ್ತಿಯು ಮಾಡಬಾರದು. ಇದರ ಮೇಲೆ ಯಾವುದೇ ಪಂಥದ ಏಕಸ್ವಾಮ್ಯವಿಲ್ಲ; ಇದು ಎಲ್ಲರ ಧರ್ಮ.

ಅಂತಹ ಬದುಕನ್ನು ಬದುಕಲು, ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸುವುದು ಅತ್ಯಾವಶ್ಯಕ. ಮನಸ್ಸಿನ ಮೇಲೆ ಪ್ರಭುತ್ವ ಗಳಿಸುವುದು, ಮನಸ್ಸನ್ನು ನಿಯಂತ್ರಿಸುವುದು ಎಲ್ಲರ ಧರ್ಮವಾಗಿದೆ; ಇದು ಒಂದು ನಿರ್ದಿಷ್ಟ ಪಂಥದ ಏಕಸ್ವಾಮ್ಯವಲ್ಲ. ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸಲು, ಎಲ್ಲಾ ಪಂಥದವರಿಗೂ ಒಪ್ಪಿಗೆಯಾಗುವಂತಹ ಒಂದು ಪ್ರಯೋಗ ವಿಧಾನ(Technique)ಇರಬೇಕು.

ದ್ವೇಷ ಮತ್ತು ವೈರದ ನಕಾರಾತ್ಮಕತೆಗಳಿಂದ ಮನಸ್ಸನ್ನು ಬಿಡುಗಡೆಗೊಳಿಸಿ, ಶುದ್ಧಿಮಾಡಿ, ವ್ಯಕ್ತಿಯು ಅದನ್ನು ಪ್ರೀತಿ, ಕರುಣೆ ಮತ್ತು ಸದ್ಭಾವನೆಗಳಿಂದ ತುಂಬಬೇಕು. ಇದು ಎಲ್ಲರ ಧರ್ಮ; ಇದು ಯಾವುದೇ ಒಂದು ಪಂಥದ ಏಕಸ್ವಾಮ್ಯವಲ್ಲ. ಇದಕ್ಕೋಸ್ಕರ, ಪ್ರತಿಯೊಂದು ಪಂಥವೂ ಯಾವುದೇ ವಿರೋಧವಿಲ್ಲದೆ ಒಪ್ಪಿಕೊಳ್ಳುವಂತಹ ಒಂದು ಪ್ರಯೋಗ ವಿಧಾನವನ್ನು ಅಭ್ಯಾಸ ಮಾಡಬೇಕು.

ದೇಹವನ್ನು ಆರೋಗ್ಯವಾಗಿಡಲು ಆಸನಗಳು (ಯೋಗದ ಭಂಗಿಗಳು) ಮತ್ತು ಪ್ರಾಣಾಯಾಮದ (ಉಸಿರಾಟದ ವ್ಯಾಯಾಮಗಳು) ರೂಪದಲ್ಲಿ ಭಾರತ ದೇಶವು ಕೊಟ್ಟ ವಿಜ್ಞಾನವನ್ನು ಜಗತ್ತಿನಾದ್ಯಂತ ಒಪ್ಪಿಕೊಳ್ಳಲಾಗಿದೆ, ಏಕೆಂದರೆ ಅದು ಸಾರ್ವತ್ರಿಕ. ಇದಕ್ಕೆ ಯಾವುದೇ ಪಂಥದ ತಕರಾರಿಲ್ಲ. ಅದೇ ತರಹ, ಎಳ್ಳಷ್ಟೂ ವ್ಯತ್ಯಾಸವಿಲ್ಲದೆ, ಮನಸ್ಸನ್ನು ನಿಯಂತ್ರಣದಲ್ಲಿಡುವ ಮತ್ತು ಅದನ್ನು ಆರೋಗ್ಯವಾಗಿ ಮತ್ತು ಬಲಯುತವಾಗಿ ಮಾಡುವ ಶಕ್ತಿಯಿರುವ, ಎಲ್ಲಾ ಧರ್ಮಗಳ ಪಂಥೀಯ ರೇಖೆಗಳನ್ನು ದಾಟಿದ, ಪ್ರಾಚೀನ ಭಾರತದ ಸಾರ್ವತ್ರಿಕ ವಿಪಶ್ಯನ ಧ್ಯಾನ ಸಾಧನೆಯನ್ನು, ಪ್ರಪಂಚದಾದ್ಯಂತ ಒಪ್ಪಿಕೊಳ್ಳಲಾಗಿದೆ.

ಶೀಲ(ನೈತಿಕತೆ), ಸಮಾಧಿ(ಮನಸ್ಸಿನ ಮೇಲೆ ಪ್ರಭುತ್ವ), ಪನ್ಯ (ಅನುಭವ ಜ್ಞಾನ), ಮತ್ತು ಮೆತ್ತಾ (ಕರುಣೆಯುಳ್ಳ ಪ್ರೀತಿ) ಇವುಗಳ, ಸಾರ್ವತ್ರಿಕವಾಗಿ ಒಪ್ಪಿಕೊಳ್ಳಬಹುದಾದ, ಪ್ರಯೋಜನಕಾರಿ ವಿಪಶ್ಯನ ಧ್ಯಾನ ಸಾಧನೆಯ ಬೆಂಬಲದಿಂದ, ಭ್ರಾತೃತ್ವ ಪರಸ್ಪರ ಪ್ರೀತಿ, ಮತ್ತು, ಪ್ರೇಮದ ವಾತಾವರಣ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಇದು ಗಣರಾಜ್ಯದ ಒಗ್ಗಟ್ಟನ್ನು ಬಲಪಡಿಸುತ್ತದೆ.

ಪಂಥೀಯತೆಯಲ್ಲಿನ ನಂಬಿಕೆಯಂತೆಯೇ, ಜಾತೀಯತೆಯಲ್ಲಿನ ರಾಕ್ಷಸೀಯ ನಂಬಿಕೆಯು ಸಹ ದೇಶದ ಭದ್ರತೆಗೆ ಈ ಹಿಂದೆ ಅಪಾಯಕಾರಿಯಾಗಿತ್ತು, ಇವತ್ತೂ ಅದು ಅಪಾಯಕಾರಿಯಾಗಿದೆ ಮತ್ತು ಭವಿಷ್ಯದಲ್ಲಿಯೂ ಅದು ಅಪಾಯಕಾರಿಯಾಗಿ ಮುಂದುವರಿಯುತ್ತದೆ. ಇದು ದೇಶದ ನರನಾಡಿಗಳಲ್ಲಿ ತುಂಬಿರುವ ಮೃತ್ಯುಕಾರಕ ವಿಷ. ಇದನ್ನು ಬೇಗ ತೆಗೆದು ಹಾಕಿದರೆ ದೇಶದ ಭದ್ರತೆ ಮತ್ತು ಘನತೆಗೆ ಒಳ್ಳೆಯದಾಗುತ್ತದೆ. ಉಚ್ಚ ಮತ್ತು ನೀಚ ವರ್ಗಗಳ ನಡುವಿನ ವ್ಯತ್ಯಾಸ ಮುಂದುವರಿಯುತ್ತದೆ, ಅದನ್ನು ನಿರ್ಮೂಲ ಮಾಡಲು ಸಾಧ್ಯವಿಲ್ಲ; ಆದರೆ ಈಗಿರುವ ತಾರತಮ್ಯದ ಆಧಾರವನ್ನು ನಿರ್ಮೂಲ ಮಾಡುವುದು ಅತ್ಯಾವಶ್ಯಕ. ತನ್ನ ತಾಯಿಯ ಗರ್ಭದಲ್ಲಿ ಹುಟ್ಟಿದ ಮಾತ್ರಕ್ಕೆ ಒಬ್ಬ ವ್ಯಕ್ತಿಯನ್ನು ಉಚ್ಚ ಅಥವಾ ನೀಚ ಎಂದು ಪರಿಗಣಿಸಬಾರದು. ಒಬ್ಬ ವ್ಯಕ್ತಿಯು ಅನಾರೋಗ್ಯಕರವಾದ ಕ್ರಿಯೆಗಳನ್ನು ಮಾಡುತ್ತಿದ್ದರೆ, ಅವನು ಅನೈತಿಕ ವ್ಯಕ್ತಿಯಾಗಿದ್ದರೆ, ಆಗ ಅವನು ದುಷ್ಟ ಮತ್ತು ಅಧಾರ್ಮಿಕ ವ್ಯಕ್ತಿ. ಅವನು ಸಮಾಜದಲ್ಲಿ ಅಲ್ಪ ಸ್ಥಾನ ಹೊಂದಿರುತ್ತಾನೆ; ಅವನ ಅಂತಸ್ತು ಕೆಳಗಿನದಾಗಿರುತ್ತದೆ. ಹಾಗೆಯೇ, ಅವನು ಆರೋಗ್ಯಕರವಾದ ಕೆಲಸಗಳನ್ನು ಮಾಡಿದರೆ, ಸದಾಚಾರಿಯಾಗಿದ್ದರೆ, ಆಗ ಅವನು ಒಳ್ಳೆಯ ವ್ಯಕ್ತಿ, ಒಬ್ಬ ಸಂತ. ಅವನು ಸಮಾಜದ ಗೌರವಕ್ಕೆ ಪಾತ್ರನಾಗುತ್ತಾನೆ. ಅವನ ಅಂತಸ್ತು ಉನ್ನತ ಮಟ್ಟದ್ದಾಗಿರುತ್ತದೆ.

ಹುಟ್ಟಿನ ಕಾರಣದಿಂದ ಉಚ್ಚ ಮತ್ತು ನೀಚ, ಅಂತಸ್ತು ಎಂಬ ತಪ್ಪು ನಂಬಿಕೆಯು ಹುಲುಸಾಗಿ ಬೆಳೆದರೆ, ಧರ್ಮವು ದುರ್ಬಲವಾಗುತ್ತದೆ. ಆಗ ನೈತಿಕ ಜೀವನ ನಡೆಸುವುದು, ಅಂದರೆ ಧರ್ಮದ ಅಭ್ಯಾಸ ಮಾಡುವುದು ಮುಖ್ಯವಾಗುವುದಿಲ್ಲ. ಹುಟ್ಟಿನ ಕಾರಣದಿಂದ ಒಬ್ಬ ಅನೈತಿಕ ವ್ಯಕ್ತಿಯು ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದರೆ, ನೈತಿಕತೆಯು ಅಸಂಬದ್ಧವಾಗುತ್ತದೆ. ಹುಟ್ಟಿನ ಕಾರಣದಿಂದ ಯಾರನ್ನಾದರು ಕೆಳದರ್ಜೆಯ ವ್ಯಕ್ತಿ ಎಂದು ಪರಿಗಣಿಸಿದರೆ, ಆ ವ್ಯಕ್ತಿಗೆ ನೈತಿಕತೆಯು ಪ್ರಮುಖವಾಗುವುದಿಲ್ಲ. ನೈತಿಕತೆಯ ಆಧಾರದ ಮೇಲೆ ಯಾರನ್ನಾದರು ಸಮಾಜದಲ್ಲಿ ಉತ್ತಮ ಅಥವಾ ಅಧಮ, ಉಚ್ಚ ಅಥವಾ ನೀಚ, ಗೌರವಾನ್ವಿತ ಅಥವಾ ತುಚ್ಛ ಎಂದು ಪರಿಗಣಿಸಿದರೆ, ಆಗ, ದುರಾಚಾರಿಯಾಗಿರುವ ಕಾರಣದಿಂದ ಇಂದು ಒಬ್ಬನನ್ನು ಕೀಳಾಗಿ ಅಗೌರವದಿಂದ ಕಂಡರೆ ನಾಳೆ ಅವನು ಸಚ್ಚಾರಿತ್ರದವನಾಗಬಹುದು ಮತ್ತು ಸಮಾಜದಲ್ಲಿ ಉನ್ನತ ಸ್ಥಾನ ಪಡೆದು ಗೌರವಾನ್ವಿತ ವ್ಯಕ್ತಿಯಾಗಬಹುದು. ಹುಟ್ಟಿಗೆ ಬದಲಾಗಿ ನಡತೆಯನ್ನು ಸಮಾಜದ ಮೇಲು ಅಥವಾ ಕೀಳು ಅಂತಸ್ತಿನ ಮಾನದಂಡವನ್ನಾಗಿ ಪರಿಗಣಿಸಿದರೆ, ಸಮಾಜದ ಪ್ರಗತಿಯು ಸಮೃದ್ಧವಾಗುತ್ತದೆ, ದೇಶದ ಪ್ರಗತಿಯು ಸಮೃದ್ಧವಾಗುತ್ತದೆ. ಬಹಳ ಕಾಲದಿಂದ ದೇಶದ ನರನಾಡಿಗಳಲ್ಲಿ ಹರಿಯುತ್ತಿರುವ ವಿಷವು ಅಮೃತವಾಗಿ ಮಾರ್ಪಾಡಾಗುತ್ತದೆ.

ವ್ಯಕ್ತಿಯಲ್ಲಿ ಪರಿಶುದ್ಧ ಧರ್ಮವನ್ನು ತುಂಬುವ ಪಂಥರಹಿತ ಸಾರ್ವತ್ರಿಕ ವಿಪಶ್ಯನ ಧ್ಯಾನ ಸಾಧನೆಯ ಅಭ್ಯಾಸವು, ದೇಶವನ್ನು ಸರ್ವಾಂಗೀಣ ಅಭಿವೃದ್ಧಿಗೆ ಮುನ್ನಡೆಸಲಿ; ಪರಸ್ಪರ ದ್ವೇಷ ಮತ್ತು ವೈಮನಸ್ಸುಗಳಿಗೆ ಬದಲಾಗಿ, ಪ್ರೀತಿ, ಪ್ರೇಮ ಮತ್ತು ಭ್ರಾತೃತ್ವ ಬೆಳೆಯಲಿ. ಇದರಲ್ಲಿ ಮಾತ್ರ ಗಣರಾಜ್ಯದ ಭದ್ರತೆ ಅಡಗಿದೆ, ಇದರಲ್ಲಿ ಮಾತ್ರ ದೇಶದ ಕಲ್ಯಾಣ ಮತ್ತು ಸಂತೋಷ ಅಡಗಿದೆ. (ಪು.ಸಂ. 63–71)

**ಪ್ರಶ್ನೋತ್ತರಗಳು**

**ಪ್ರಶ್ನೆ:** ಎಲ್ಲಾ ಸಂವೇದನೆಗಳೂ ಒಂದು ಉದ್ದೇಶವನ್ನು ಹೊಂದಿವೆಯೇ? ಅಥವಾ ಕೆಲವು ಅನುಭವಗಳು ಅರ್ಥವಿಲ್ಲದವುಗಳೇ? ನಮಗೆ ಏನು ಆಗುತ್ತದೆಯೋ ಅದೆಲ್ಲವೂ ಒಂದು ಉದ್ದೇಶ, ಒಂದು ಅರ್ಥ ಪಡೆದಿದೆ ಎಂದು ವಿಪಶ್ಯನದ ಅಭ್ಯಾಸದಿಂದ ನೀವು ಕಾಣುತ್ತೀರಾ?

**ಗೋಯಂಕಾಜಿ:** ಒಂದು ಉದ್ದೇಶವಿದೆ–ಆದರೆ ಉದ್ದೇಶ ಏನೆಂಬುದು ನಿಮಗೆ

**RNI. No. : KARKAN/2015/68727. Postal Regn. No.: RNP/KA/BGS/2253/2017-19**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30. Pages-4.**

ಗೊತ್ತಿಲ್ಲ. "ನೋಡು, ನಾನು ಅಶಾಶ್ವತ. ನಾನು ಬರುವುದೇ ಹೊರಟು ಹೋಗಲು" ಎಂಬ ಬೋಧನೆಯನ್ನು ಉದಯವಾಗುವ ಪ್ರತಿಯೊಂದು ಸಂವೇದನೆಯೂ ಕೊಡುತ್ತಿರುತ್ತದೆ. ಅದರಿಂದ ತಳಮಳಗೊಳ್ಳಬೇಡಿ. ಆ ಸಂವೇದನೆಗೆ ಪರವಶರಾಗಬೇಡಿ. ನಿಮ್ಮ ಅಭ್ಯಾಸವನ್ನು ಬದಲಾಯಿಸಲು ಈ ಸಂವೇದನೆಯನ್ನು ಒಂದು ಅಸ್ತ್ರವನ್ನಾಗಿ ಮಾಡಿಕೊಳ್ಳಿ. ಈ ದೃಷ್ಟಿಯಿಂದ ಎಲ್ಲಾ ಅನುಭವಗಳೂ ಅರ್ಥಪೂರ್ಣ.

ಉದ್ದೇಶ ಏನು ಎಂಬುದು ನಮಗೆ ಗೊತ್ತಿಲ್ಲದಿದ್ದರೆ, ಆಗ ನಾವು ಪರವಶಗೊಳ್ಳುತ್ತೇವೆ, ಮತ್ತು ನಾವು ಪ್ರತಿಕ್ರಿಯಿಸುತ್ತಾ, ಪ್ರತಿಕ್ರಿಯಿಸುತ್ತಾ ಇರುತ್ತೇವೆ. ನಮಗೆ ನಾವೇ ದುಃಸ್ಥಿತಿ ತಂದುಕೊಳ್ಳುತ್ತೇವೆ. ಇದು ನಮ್ಮ ಅಜ್ಞಾನ. ತರಂಗಗಳ ಉದ್ದೇಶವು ಒಳ್ಳೆಯದಾಗಿದೆ; ಅವು ನಮಗೆ ಎಚ್ಚರಿಕೆ ಕೊಡುತ್ತವೆ. ನಾನು ಕೋಪಗೊಂಡಿದ್ದೇನೆ, ಮತ್ತು ಆ ಕೋಪದ ಕಾರಣದಿಂದ ಒಂದು ತರಂಗ ಪ್ರಾರಂಭವಾಗಿದೆ. "ನೋಡು, ಕೋಪಗೊಳ್ಳಬೇಡ, ಕೋಪಗೊಂಡರೆ ಇದನ್ನು ಅನುಭವಿಸುತ್ತೀಯೇ ಮತ್ತು ಅದು ದ್ವಿಗುಣವಾಗುತ್ತದೆ" ಎಂದು ಈ ತರಂಗವು ಎಚ್ಚರಿಸುತ್ತದೆ. ಈಗ ನಾನು ಆ ಎಚ್ಚರಿಕೆಯನ್ನು ಪರಿಗಣಿಸದಿದ್ದರೆ, ನನಗೆ ನಾನೇ ಹಾನಿಮಾಡಿಕೊಳ್ಳುತ್ತೇನೆ. "ಸರಿ, ನೋಡು, ನನ್ನ ಕೋಪದ ಕಾರಣದಿಂದ ಒಂದು ಸಂವೇದನೆ ಬಂದಿದೆ, ಅದು ಎಷ್ಟೊತ್ತು ಇರುತ್ತದೆ ಎಂಬುದನ್ನು ನಾನು ಈಗ ನೋಡುತ್ತೇನೆ," ಎಂದು ನೀವು ಗಮನಿಸಲು ಪ್ರಾರಂಭಿಸುತ್ತೀರಿ; ಇದೇ ಸಂವೇದನೆಯ ಒಳ್ಳೆಯ ಉದ್ದೇಶ.

* * * * *

## ವಿಪಶ್ಯನ ಧ್ಯಾನ ಕೇಂದ್ರ, ದಾವಣಗೆರೆ

**10 ದಿನದ ಶಿಬಿರಗಳು :** ಮಾರ್ಚ್ 20–31, ಏಪ್ರಿಲ್ 10–21, ಮೇ 8–19 ಪ್ರತಿ ತಿಂಗಳು ಒಂದು ಶಿಬಿರ ನಡೆಸಲಾಗುವುದು. ಮಾಹಿತಿಗಾಗಿ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ. ಧಮ್ಮ ಸೇವಕರ ಕಾರ್ಯಾಗಾರ: ಫೆಬ್ರವರಿ 16 ಮತ್ತು 17, 2019. ಮೂರು ದಿನಗಳ ಶಿಬಿರ: ಹಳೆಯ ಸಾಧಕರಿಗೆ ಮಾತ್ರ. ಫೆಬ್ರವರಿ 21–24, 2019

**ಒಂದು ದಿನದ ಶಿಬಿರ :** ಪ್ರತಿ ಭಾನುವಾರ ಬೆಳಿಗ್ಗೆ 10 ರಿಂದ 1.30 ರವರೆಗೆ. (ಹತ್ತು ದಿನದ ಶಿಬಿರ ನಡೆಯುವಾಗ ಬಿಟ್ಟು)

**ವಿಳಾಸ :** ವಿಪಶ್ಯನ ಧ್ಯಾನ ಮತ್ತು ಸಂಶೋಧನಾ ಕೇಂದ್ರ, ಬೆಳಕು ಸಂಸ್ಥೆ ಆವರಣ, ಆಂಜನೇಯ ಮಿಲ್ ಹತ್ತಿರ, ದಾವಣಗೆರೆ ವಿಶ್ವವಿದ್ಯಾನಿಲಯ ರಸ್ತೆ, ದಾವಣಗೆರೆ. ನಗರ ಸಾರಿಗೆ ಬಸ್ ಸಂಖ್ಯೆ 101 (ವಿದ್ಯಾನಗರದಿಂದ ದಾವಣಗೆರೆ ವಿಶ್ವವಿದ್ಯಾನಿಲಯ). ಆಂಜನೇಯ ಮಿಲ್ ನಿಲ್ದಾಣದಲ್ಲಿ ಇಳಿದು ಬಸ್ ಹೋದ ದಾರಿಯಲ್ಲಿ ಸ್ವಲ್ಪ ಮುಂದೆ ಸಾಗಿದರೆ, ವಿಪಶ್ಯನ ಧ್ಯಾನ ಕೇಂದ್ರದ ಬೋರ್ಡ್ ಕಾಣಿಸುತ್ತದೆ. ಅಲ್ಲಿಂದ ಒಂದು ಕಿ.ಮೀ. ದೂರವಿದೆ. ಬೆಂಗಳೂರಿನಿಂದ ಬಸ್‌ನಲ್ಲಿ ಪ್ರಯಾಣಿಸುವವರು ಬಾಡಾ ಕ್ರಾಸ್‌ನಲ್ಲಿ ಇಳಿದು ನಗರ ಸಾರಿಗೆ ಬಸ್ ಹತ್ತಿ ಆಂಜನೇಯ ಮಿಲ್ ಹತ್ತಿರ ಇಳಿದು ಹೋಗಬಹುದು. ಬಾಡಾ ಕ್ರಾಸ್‌ನಿಂದ 2ಕಿ.ಮೀ ದೂರವಿದೆ.

**ಸಂಪರ್ಕ ಸಂಖ್ಯೆಗಳು :** 9448588789, 9844245111, 9986962762, 8618103741, 9008733008, 8762086089.

**10 ದಿನದ ಶಿಬಿರ ಆಯೋಜಿಸುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು:** 2019: ಜನವರಿ 2–13, 16–27, 30–10 ಫೆಬ್ರವರಿ 13–24, 27–10 ಮಾರ್ಚ್ 13–24, ಏಪ್ರಿಲ್ 10–21, ಮೇ 1–12, 29–9 ಜೂನ್ 12–23, 26–7 ಜುಲೈ 10–21, 24–4 ಆಗಸ್ಟ್ 21–1 ಸೆಪ್ಟಂಬರ್ 4–15, 18–29. ಅಕ್ಟೋಬರ್ 29–9 ನವೆಂಬರ್. ಡಿಸೆಂಬರ್ 11–22. **ಸತಿಪಟ್ಠಾನ ಶಿಬಿರಗಳು:** ಮಾರ್ಚ್ 28–5 ಏಪ್ರಿಲ್, ನವೆಂಬರ್ 12–20, **3ದಿನದ ಶಿಬಿರಗಳು: ಏಪ್ರಿಲ್ 25–28, ಮೇ 23–26. ಹದಿಹರೆಯದ ಗಂಡು ಮಕ್ಕಳ ಶಿಬಿರ: ಮೇ 14–22. ಒಂದು ದಿನದ ಶಿಬಿರ:** ಪ್ರತಿ ಭಾನುವಾರ ಬೆಳಿಗ್ಗೆ 11ರಿಂದ ಸಾಯಂಕಾಲ 4 ಗಂಟೆ. **ಮಕ್ಕಳ ಶಿಬಿರ:** ಪ್ರತಿ ತಿಂಗಳು ಯಾವುದಾದರೂ ಒಂದು ಭಾನುವಾರ. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ಮೊಬೈಲ್: 7829912733, 8861644284, 9972588377,
ಇ–ಮೇಲ್: info@paphulla.dhamma.org; website: www.dhamma.org. **7406934095**

### ವಾರದ ಒಂದು ಗಂಟೆಯ ಸಾಮೂಹಿಕ ಧ್ಯಾನ ಶಿಬಿರಗಳ ಮಾಹಿತಿ

**ಬೆಂಗಳೂರು: ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593. **ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.
**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447
**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ:**
**http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473. **ಶಿವಮೊಗ್ಗ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6. ಸಂಪರ್ಕಿಸಿ: 8453845690, 9480086856, 9449623606.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ–ಅಂಚೆ

ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.